# ಉಷಾಕಿರಣ ಎಂಬ ಆಶಾಕಿರಣ

**ಪರಿಸರ ಸಮತೋಲನದ ಬಿಕ್ಕಟ್ಟಿನ ಸಂದರ್ಭದಲ್ಲಿ ಖಾಸಗಿ ಕಾಡುಗಳು ಆಶಾಕಿರಣದಂತೆ ಒದಗಿಬರಬಲ್ಲವು. ಇಂಥದೊಂದು ವಿಶಿಷ್ಟ ಕಾಡು, ಸಾಗರ ತಾಲ್ಲೂಕಿನಲ್ಲಿದೆ. 'ಉಷಾಕಿರಣ' ಎನ್ನುವುದು ಈ ಖಾಸಗಿ ಕಾಡಿನ ಹೆಸರಷ್ಟೇ ಅಲ್ಲ; ಅದು ಪರಿಸರ ಸಂರಕ್ಷಣೆಯ ಒಂದು ಜೀವಂತ ಪಠ್ಯ.**

■ **ಅಖಿಲೇಶ್ ಚಿಪ್ಪಳಿ**



ಶಿವಮೊಗ್ಗ ಜಿಲ್ಲೆಯ ಸಾಗರ ಪಟ್ಟಣದಿಂದ ಉತ್ತರಾಭಿಮುಖವಾಗಿ ಹೆಗ್ಗೋಡಿನೆಡೆಗೆ 7 ಕಿ.ಮೀ. ಬೈಪಾಸ್ ರಸ್ತೆಯಲ್ಲಿ ಸಾಗಿ, ಮುಖ್ಯರಸ್ತೆಯಿಂದ ಎಡಕ್ಕೆ ತಿರುಗಿದರೆ 300 ಮೀಟರ್ ದೂರದಲ್ಲಿ ಕಬ್ಬಿಣದಿಂದ ನಿರ್ಮಿಸಿದ ಬಾಗಿಲು ಸಿಗುತ್ತದೆ. ಸಮಯ ನಿಗದಿ ಮಾಡಿಕೊಂಡು ಬಂದರೆ, ಗೇಟಿನ ಹತ್ತಿರ ಬಂದು ನಿಮ್ಮನ್ನು ಒಳಗೆ ಕರೆದೊಯ್ಯಲು ಯಾರಾದರೂ ಬರುತ್ತಾರೆ. ಗೇಟಿನಿಂದ ಬಲಕ್ಕೆ ತಿರುಗಿದರೆ 10 ಅಡಿ ಅಗಲದ ಕಚ್ಚಾರಸ್ತೆ. ರಸ್ತೆಯ ಬಲಭಾಗದಲ್ಲಿ ನೂರಾರು ಹಚ್ಚ ಹಸುರಿನ ಬಿದಿರು ಗಿಡಗಳು ಗಾಳಿಗೆ ತೊನೆಯುತ್ತಿರುವುದನ್ನು ಕಾಣುವಿರಿ. ಹಾಗೆಯೇ ಎಡಭಾಗದಲ್ಲಿ ದಟ್ಟವಾಗಿ ಹೆಣೆದುಕೊಂಡ ಅಸಂಖ್ಯ ಗಿಡ, ಮರ, ಬಳ್ಳಿಗಳು ಕಾಣುತ್ತವೆ. ಬೆಳಗಿನ ಅಥವಾ ಸಂಜೆಯ ಇಳಿಹೊತ್ತಿನಲ್ಲಿ ಹೋದರೆ ನಿಮಗೆ ನೂರಾರು ಪಕ್ಷಿಗಳ ಕಲರವ ಕೇಳುವ ಭಾಗ್ಯವಿದೆ.

ಇದು 'ಉಷಾಕಿರಣ' ಎಂಬ ಖಾಸಗಿ ಕಾಡಿನ ಕಥೆ.

ಬೆಂಗಳೂರಿನ ಉದ್ಯಮಿಯೊಬ್ಬರು ಸಾಗರದಿಂದ ಬರೀ 7 ಕಿ.ಮೀ. ದೂರದಲ್ಲೊಂದು 21 ಎಕರೆ ಖುಷ್ಕಿ ಅಥವಾ ಒಣಭೂಮಿ ಎನ್ನಬಹುದು, ಅದನ್ನು ಕೊಂಡರು. ಅವರು ಮೂಲತಃ ಕೃಷಿಕರೇ ಆಗಿದ್ದು, ಓದಿ ಬೆಂಗಳೂರು ಸೇರಿ ಉದ್ಯಮಿಯಾಗಿದ್ದರು. ಜಾಗವನ್ನೇನೋ ಕೊಂಡರು. ಆ ಜಾಗದಲ್ಲಿ ಏನು ಮಾಡುವುದು? ನೀರಿಲ್ಲದ ಒಣಭೂಮಿಯಿಂದ ಉತ್ಪತ್ತಿ ಬರಬೇಕೆಂಬ ಆಲೋಚನೆಯಿಂದ ಖರೀದಿಸಿದ್ದೂ ಆಗಿರಲಿಲ್ಲ. ಅವರ ಒಳ ಮನಸ್ಸಿನಲ್ಲಿ ಅಲ್ಲೊಂದು ಆಸ್ಪತ್ರೆ ನಿರ್ಮಿಸಿ ಬಡಬಗ್ಗರಿಗೆ ಉಚಿತ ಚಿಕಿತ್ಸೆ ನೀಡಿ ಸಮಾಜಕ್ಕೆ ಒಳಿತು ಮಾಡುವ ಆಲೋಚನೆಯಿತ್ತು. ಆದರೆ ಸ್ನೇಹಿತರ ಸಲಹೆ ಮೇರೆಗೆ ಆ ಯೋಜನೆ ಕೈಬಿಟ್ಟು, 21 ಎಕರೆ ಭೂಮಿಯನ್ನು ಖಾಸಗಿ ಕಾಡು ಮಾಡುವ ಸಾಹಸಕ್ಕಿಳಿದರು.

ಮಧ್ಯ ಪಶ್ಚಿಮಘಟ್ಟದ ಕಾಲಬುಡದಲ್ಲಿ ಮಾದರಿಯಾಗಿ ಕಾಡು ಬೆಳೆಸುವ ಕಾರ್ಯ ಸುಲಭವಾಗಿರಲಿಲ್ಲ. ಕುರುಚಲು ಕಾಡು ಮೇಲೆದ್ದು ನೈಜ ಅರಣ್ಯದ ಹಂತಕ್ಕೆ ಬರುವ ಹೊತ್ತಿಗೆ ಸಾಕಷ್ಟು ಸವಾಲುಗಳೂ ಎದುರಾದವು. ಮರಳುಗಾಡಿನ ನೆಂಟನಂತಿರುವ ಈ ಭೂಮಿಯಲ್ಲಿ ಏನೇನೂ ಬೆಳೆಯದು, ಭೂಪರಿವರ್ತನೆ ಮಾಡಿ